**ಒ.ಎಸ್.ನಂಬ್ರಃ 56/2016 ಪಿ .ಡಬ್ಲ್ಯೂ ಃ 2**

ದಿನಾಂಕಃ 22-04-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು

**ಪಾಟಿ ಸವಾಲುಃ 4 ನೇ ಪ್ರತಿವಾದಿ ಪರ ಶ್ರೀ.ಎಂ.ಜೆ.ಎಸ್ ವಕೀಲರಿಂದ**

ಈ ದಾವೆಯಲ್ಲಿ ನಾನು ಉದಾರಣೆ ಸಲ್ಲಿಸಿದ್ದೇನೆ . ನಾನು ಮತ್ತು ವಾದಿ ಒಂದಾಗಿ ದಾವೆಯನ್ನು ಸಲ್ಲಿಸಿರುತ್ತೇವೆ . ನಾನು ಮತ್ತು 4 ನೇ ಪ್ರತಿವಾದಿಯ ಗಂಡ ಸರ್ವೋತ್ತಮ ಶೆಟ್ಟಿ ಜಂಟಿಯಾಗಿ ಯಾವುದೇ ಆಸ್ತಿಗಳನ್ನು ಖರೀದಿಸಿಲ್ಲ. ಆ ರೀತಿ ನಾವು ಒಟ್ಟಾಗಿ ಖರೀದಿಸಿದ ಸ್ವತ್ತಿನ ಸಂಬಂಧ ನಮ್ಮಿಬ್ಬರ ನಡುವೆ ತಕರಾರು ಬಂದಿರುತ್ತದೆ ಎಂದರೆ ಸರಿಯಲ್ಲ . ಸರ್ವೋತ್ತಮ ಶೆಟ್ಟಿ ನನ್ನ ವಿರುದ್ದ ವಿಭಾಗಕ್ಕಾಗಿ OS 69/2008 ರಂತೆ ದಾವೆ ದಾಖಲಿಸಿದ್ದಾರೆ ಎಂದರೆ ಸಾಕ್ಷಿಯು ಸುಳ್ಳು ದಾವೆ ದಾಖಲಿಸಿರುತ್ತಾರೆ ಎಂದು ಉತ್ತರಿಸಿರುತ್ತಾರೆ . ಸದರಿ ದಾವೆ ಇತ್ಯರ್ಥಕ್ಕೆ ಬಾಕಿ ಇದೆ . ನನಗೆ ಸದರಿ ದಾವೆಯಲ್ಲಿ ಶ್ರೀಮತಿ ಸ್ಮಿತಾರವರು ವಕೀಲರಾಗಿದ್ದಾರೆ. ಸದರಿ ದಾವೆಯಲ್ಲಿ ನನ್ನ ಪರವಾಗಿ ಈ ದಾವೆಯ ವಾದಿ ಪರ ವಕೀಲರು ಹಾಜರಾಗುತ್ತಾರೆ ಎಂದರೆ ಸರಿ. ಸದರಿ ದಾವೆ ಡಿಕ್ರಿ ಆಗಿ ಸರ್ವೋತ್ತಮ ಶೆಟ್ಟಿ ರವರ ಹಿಸ್ಸೆ ಆತನಿಗೆ ಸೇರಬೇಕು ಎಂದು ಆದೇಶವಾಗಿದೆ ಎಂದರೆ ಸರಿ. ಸದರಿ ದಾವೆಯಲ್ಲಿ ಖರ್ಚು ಸಮೇತ ಹಿಂತಿರುಗಿಸಬೇಕಾಗಿ ಆದೇಶವಾಗಿದೆ ಎಂದರೆ ಸರಿಯಲ್ಲ. ನಾನು ಸದರಿ ಆದೇಶದ ಮೇಲೆ FDP 14/2014 ರಂತೆ ಪ್ರಕರಣ ದಾಖಲಿಸಿದ್ದರು ಎಂದರೆ ಸರಿ. ಸದರಿ ಪ್ರಕರಣದಲ್ಲಿ ಬೇರೆ ವಕೀಲರ ಮೂಲಕ ನಾನು ಹಾಜರಾಗಿದ್ದೇನೆ ಎಂದರೆ ಸರಿ. ಅದರ ಅಂತಿಮ ಆದೇಶ ದಿನಾಂಕ 25-06-2018 ರಂದು ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಒಳಗೊಂಡ ಆಸ್ತಿ ನಾನು ಮತ್ತು 4 ನೇ ಪ್ರತಿವಾದಿಯ ಗಂಡ ಸರ್ವೋತ್ತಮ ಶೆಟ್ಟಿ ಜಂಟಿಯಾಗಿ ಖರೀದಿಸಿದ ಆಸ್ತಿ ಅಲ್ಲ. OS 69/2008 ಹಾಗೂ FDP 14/2014 ರ ಆದೇಶದ ವಿರುದ್ದ ನಾನು ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ . ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸಬಹುದು . ಈ ಮೇಲೆ ಹೇಳಿದ ದಾವೆಗಳನ್ನು ದಾಖಲಿಸಿರುವ ಕಾರಣ ನಮ್ಮಿಬ್ಬರ ನಡುವೆ ಮನಸ್ತಾಪ ಇದೆ ಎಂದರೆ ಸರಿ . ಸರ್ವೋತ್ತಮ ಶೆಟ್ಟಿ ರವರಿಂದ ರೂ 83000/- ದ ಕೈ ಸಾಲವನ್ನು ಪಡೆದು ಬಾಬ್ತು ಹಿಂತಿರುಗಿಸದ ಕಾರಣ ನಮ್ಮೊಳಗೆ ಗಲಾಟೆ ನಡೆದಿರುತ್ತದೆ ಎಂದರೆ ಸರಿಯಲ್ಲ .

ನನಗೂ ಮತ್ತು 4 ನೇ ಪ್ರತಿವಾದಿಗೂ 5-6 ವರ್ಷಗಳಿಂದ ಮನಸ್ತಾಪ ಇದೆ. ನೀಡಿದ ಸಾಲವನ್ನು ಹಿಂತಿರುಗಿಸುವಂತೆ ಕೋರಿದ ಕಾರಣ ನಾನು ಸರ್ವೋತ್ತಮ ಶೆಟ್ಟಿ ಮೇಲೆ ಹಲ್ಲೆ ಮಾಡಿದ್ದೆ ಎಂದರೆ ಸರಿಯಲ್ಲ . ಈ ಸಂಬಂಧ ನಮ್ಮ ವಿರುದ್ದ CC 559/2014 ರಂತೆ ಪ್ರಕರಣ ದಾಖಲಾಗಿದೆ ಎಂದರೆ ಸರಿ. ಆದ್ದರಿಂದ ನಾನು ವಾದಿಯ ಮೂಲಕ ಈ ದಾವೆಯನ್ನು ದಾಖಲು ಮಾಡಿಸಿದ್ದೇನೆ ಎಂದರೆ ಸರಿಯಲ್ಲ . ಈ ದಾವೆಯಲ್ಲಿ 4 ನೇ ಪ್ರತಿವಾದಿ ಏನು ಸಾಧನೆ ಮಾಡುತ್ತಿದ್ದಾರೆ ಎಂದು ತಿಳಿದುಕೊಂಡಿದ್ದೇನೆ . ವಾದಿಯ ಪರವಾಗಿ ಆಕೆಯ ಗಂಡ ಶಂಕರ ಶೆಟ್ಟಿರವರ ವಿಚಾರಣೆಯಾಗಿದೆ

ಎಂದರೆ ಸರಿ. ಈ ದಾವೆ ದಾಖಲಿಸುವ 10 ವರ್ಷಗಳ ಪೂರ್ವದಲ್ಲಿ ಪಹಣಿ ದಾಖಲೆಗಳನ್ನು ನೋಡಿದ್ದೇನೆ. ಆ ಕಾಲಕ್ಕೆ ದಾವಾ ಸ್ವತ್ತುಗಳ ಪಹಣಿ ವೀಲುನಾಮೆಯ ಆದಾರದ ಪ್ರಕಾರ 4 ನೇ ಪ್ರತಿವಾದಿಯ ಹೆಸರಿಗೆ ಬದಲಾವಣೆ ಆದ ವಿಚಾರ ನನ್ನ ಗಮನಕ್ಕೆ ಬಂದಿರುತ್ತದೆ . ಅದರಂತೆ ಸರ್ವೇ ನಂ 46/4 ಬಿ ನ 52 ಸೆಂಟ್ಸ್ ಹಾಗೂ 46/5 ರ 34 ಸೆಂಟ್ಸ್ ನ ಪಹಣಿ 4 ನೇ ಪ್ರತಿವಾದಿಯ ಹೆಸರಿಗೆ ಬದಲಾಗಿರುವ ವಿಚಾರ ತಿಳಿದುಬಂದಿರುತ್ತದೆ . ಸದರಿ ವೀಲುನಾಮೆಯ ನಕಲು ಪಡೆದಿರುತ್ತೇನೆ . ದಿಃ 05-04-1995 ರಂದು ಸದರಿ ವೀಲುನಾಮೆ ಆಗಿರುತ್ತದೆ ಎಂದರೆ ಸರಿ. 1996 ರಲ್ಲಿ ಪುಟ್ಟಮ್ಮ ಶೆಡ್ತಿರವರು ಮೃತರಾಗಿರುತ್ತಾರೆ . ವೀಲುನಾವೆಯನ್ನು ಬರೆದಿಟ್ಟ ಪುಟ್ಟಮ್ಮ ಶೆಡ್ತಿ ರವರಿಗೆ ಸ್ವತ್ತುಗಳ ಮೇಲೆ ಹಕ್ಕು ಇರಲಿಲ್ಲ ಎಂದು ನನ್ನ ಆಕ್ಷೇಪಣೆಯಾಗಿದೆ . ವೀಲುನಾಮೆಯಲ್ಲಿ ಪುಟ್ಟಮ್ಮ ಶೆಡ್ತಿರವರಿಗೆ ಯಾವ ರೀತಿ ಹಕ್ಕು ಇದೆ ಎಂದು ಕಾಣಿಸಲಾಗಿದೆ ಎಂದರೆ ಸರಿ . ಸದರಿ ವೀಲುನಾಮೆ ಬರೆದಿಡಲು ಪುಟ್ಟಮ್ಮ ಶೆಡ್ತಿ ರವರಿಗೆ ಯಾವುದೇ ಹಕ್ಕು ಇಲ್ಲ ಎಂದು ತೋರಿಸಲು ಯಾವುದೇ ದಾಖಲೆ ಪಡೆದಿಲ್ಲ. ಸದರಿ ವೀಲುನಾಮೆ ಜಾರಿಗೆ ಬಂದಿದೆ ಎಂದರೆ ಸರಿ . ಸಾಕ್ಷಿಯು ಮೋಸದಿಂದ ಮಾಡಿಕೊಂಡಿದ್ದಾರೆ ಎಂದು ಉತ್ತರಿಸಿರುತ್ತಾರೆ . ಸದರಿ ವೀಲುನಾಮೆಗೆ ಸಾಕ್ಷಿದಾರರು ಯಾರು ಎಂದು ನೆನಪಿಲ್ಲ, ಆದರೆ ನೋಡಿರುತ್ತೇನೆ . ಸಾಕ್ಷಿದಾರರನ್ನು ಈ ಬಗ್ಗೆ ವಿಚಾರಿಸಿಲ್ಲ . ಅದರ ಪ್ರತಿಯನ್ನು ಕುಂದಾಪುರ ಉಪ ನೊಂದಣಿಧಿಕಾರಿಗಳ ಕಚೇರಿಯಿಂದ ಪಡೆದಿರುತ್ತೇನೆ. ಅದರ ಪ್ರತಿಯನ್ನು ವಾದಿಯೇ ಪಡೆದಿರುತ್ತಾರೆ. ಈ ದಾವೆಯನ್ನು ದಾಖಲಿಸುವ 10 ವರ್ಷಗಳ ಹಿಂದೆ ವೀಲುನಾಮೆಯ ಪ್ರತಿಯನ್ನು ವಾದಿ ಪಡೆದು ನನಗೆ ನೀಡಿರುತ್ತಾರೆ .

ಸಂಜೀವ ಶೆಟ್ಟಿ - ಪುಟ್ಟಮ್ಮ ಶೆಡ್ತಿಯ ತಂಗಿಯ ಮಗ , ರವೀಂದ್ರ ಶೆಟ್ಟಿ ದೂರದ ಸಂಬಂಧಿ. ಅವರ ಬಳಿ ಈವರೆಗೂ ಪುಟ್ಟಮ್ಮ ಶೆಡ್ತಿ ರವರ ವೀಲುನಾವೆಯ ಬಗ್ಗೆ ನಾನು ಅಥವಾ ವಾದಿ ವಿಚಾರಿಸಿಲ್ಲ. ಪುಟ್ಟಮ್ಮ ಶೆಡ್ತಿ ರವರ ಗಂಡನ ಹೆಸರು ನನಗೆ ತಿಳಿದಿಲ್ಲ . ಆಕೆಯ ಮಗ ಆನಂದ ಶೆಟ್ಟಿ ಯ ಪರಿಚಯ ಇದೆ . ಈ ಮೇಲೆ ಹೇಳಿದ 2 ಸ್ವತ್ತುಗಳು ಪುಟ್ಟಮ್ಮ ಶೆಡ್ತಿ ರವರ ಗೇಣಿ ಹಕ್ಕಿನ ಆಸ್ತಿಗಳು ಎಂದರೆ ಸಾಕ್ಷಿಯು ಆಕೆಯ ತಾಯಿಯ ಆಸ್ತಿಗಳು ಎಂದು ಉತ್ತರಿಸಿರುತ್ತಾರೆ . ಪುಟ್ಟಮ್ಮ ಶೆಡ್ತಿರವರಿಗೆ ಸದರಿ ಸ್ವತ್ತುಗಳು ತನ್ನ ಗಂಡನ ಮೂಲಕ ವಾರೀಸು ಹಕ್ಕಿನ ಮೂಲಕ ಬಂದಿರುತ್ತದೆ ಎಂದರೆ ಸರಿಯಲ್ಲ . ಸದರಿ ಸ್ವತ್ತುಗಳು ಪುಟ್ಟಮ್ಮ ಶೆಡ್ತಿಯ ತಾಯಿಯ ಗೇಣಿಯ ಆಸ್ತಿಗಳು ಎಂದು ತೋರಿಸಲು ದಾಖಲೆಗಳು ಇದೆ . 1944 ರ ನೊಂದಾಯಿತ ತಹ ಕರಾರು ಇರುತ್ತದೆ . ಪುಟ್ಟಮ್ಮ ಶೆಡ್ತಿಯ ತಾಯಿ ಅಬ್ಬಕ್ಕ ಶೆಡ್ತಿ ರವರ ಆಸ್ತಿ ಎಂದು ಕಂಡುಬರುತ್ತದೆ . ವೀಲುನಾವೆಯಲ್ಲಿ ಪುಟ್ಟಮ್ಮ ಶೆಡ್ತಿ ತನ್ನ ಸ್ವಂತ ಆಸ್ತಿ ಎಂದು ಹೇಳಿಕೊಂಡಿದ್ದಾರೆ ಎಂದರೆ ಸರಿ. 1944 ರ ಕರಾರು ನ್ನು ನಮ್ಮ ವಕೀಲರಿಗೆ ಹಾಜರುಪಡಿಸಿದ್ದೇವೆ. ಅದು ಕುಂದಾಪುರ ಉಪನೊಂದಾಣಿಧಿಕಾರಿಗಳ ಕಚೇರಿಯಲ್ಲಿ ನೊಂದಣಿಯಾಗಿದೆ . ವೀಲುನಾಮೆಯಲ್ಲಿ ಒಳಗೊಂಡ ಸ್ವತ್ತು ಪುಟ್ಟಮ್ಮ ಶೆಡ್ತಿ ರವರಿಗೆ ವೀಲುನಾಮೆ ಮಾಡಲು ಯಾವುದೇ ಹಕ್ಕು ಇರುವುದಿಲ್ಲ . 1944 ರ ಸದರಿ ದಾಖಲೆ ಅಸ್ತಿತ್ವದಲ್ಲಿ ಇಲ್ಲ ಎಂದರೆ

ಸರಿಯಲ್ಲ. ನಿಪಿ 4 ರಲ್ಲಿ ಒಳಗೊಂಡ ಸ್ವತ್ತುಗಳನ್ನು ಹೊರತುಪಡಿಸಿ ಪುಟ್ಟಮ್ಮ ಶೆಡ್ತಿರವರ ಬೇರೆ ಸ್ವಯಾರ್ಜಿತ ಸ್ವತ್ತುಗಳು ಇದ್ದವು ಎಂದರೆ ಸರಿ . ಪುಟ್ಟಮ್ಮ ಶೆಡ್ತಿ ರವರ ಹೆಸರಿನಲ್ಲಿ ಆದ ಮೇಲೆ ಹೇಳಿದ 2 ಆಸ್ತಿಗಳ ಭೂ ನ್ಯಾಯಮಂಡಳಿಯ ಆದೇಶದ ಪ್ರತಿಯನ್ನು ನೋಡಿಲ್ಲ. ಭೂ ನ್ಯಾಯಮಂಡಳಿಯಲ್ಲಿ ಪುಟ್ಟಮ್ಮ ಶೆಡ್ತಿ ರವರ ಹೆಸರಿಗೆ ಆದ ಆದೇಶದ ವಿರುದ್ಧ ನನಗೆ ಯಾವುದೇ ಆಕ್ಷೇಪ ಇಲ್ಲ . ಸದರಿ ಆದೇಶ ಅಂತಿಮವಾಗಿದೆ ಎಂದರೆ ಸರಿ. ಸದರಿ ಆದೇಶದಲ್ಲಿ ಪುಟ್ಟಮ್ಮ ಶೆಡ್ತಿ ರವರಿಗೆ ಬಂದ ಆಸ್ತಿಗಳ ಸಂಬಂಧ ಆಕೆ ವೀಲುನಾಮೆ ಮಾಡಿದ್ದಾರೆ ಎಂದರೆ ಸಾಕ್ಷಿಯು 1985 ರಲ್ಲೇ ವಿಭಾಗವಾಗಿತ್ತು ಎಂದು ಉತ್ತರಿಸಿರುತ್ತಾರೆ .

ಪುಟ್ಟಮ್ಮ ಶೆಡ್ತಿ ರವರ ಮಗ ಆನಂದ ಶೆಟ್ಟಿ ಅವಿವಾಹಿತರಾಗಿ ಮೃತಪಟ್ಟರು ಎಂದರೆ ಸರಿ. ಪುಟ್ಟಮ್ಮ ಶೆಡ್ತಿ ಮತ್ತು 4 ನೇ ಪ್ರತಿವಾದಿ ಒಟ್ಟಾಗಿ ವಾಸವಿದ್ದರು ಎಂದರೆ ಸರಿ . ಪುಟ್ಟಮ್ಮ ಶೆಡ್ತಿ ರವರು ಮೃತರಾದ ಹಿಂದಿನ ದಿನವೂ ನಾನು ಅವರೊಂದಿಗೆ ಮಾತನಾಡಿದ್ದೇನೆ . ಆಕೆ ನನ್ನೊಂದಿಗೆ ಸಹಜವಾಗಿ ಮಾತನಾಡಿರುತ್ತಾರೆ . ನನ್ನ ಹೆಂಡತಿಯ ಮನೆ ಆಲೂರು ಗ್ರಾಮದಲ್ಲಿದೆ . 1985 ರಿಂದ ನಾನು ಅಲ್ಲೇ ವಾಸವಿದ್ದೇನೆ ಎಂದರೆ ಸರಿಯಲ್ಲ . 2001 ರಿಂದ ಪ್ರತ್ಯೇಕವಾಗಿದ್ದೇವೆ . ಪುಟ್ಟಮ್ಮ ಶೆಡ್ತಿ ರವರ ಮಗ ಪವತಿಯಾದ ನಂತರ 4 ನೇ ಪ್ರತಿವಾದಿ ಮಾತ್ರ ಆಕೆಯನ್ನು ಪೋಷಿಸಿದ್ದರು ಎಂದರೆ ಸರಿಯಲ್ಲ . ಆದ್ದರಿಂದ 4 ನೇ ಪ್ರತಿವಾದಿಯ ಮೇಲೆ ಮಾತ್ರ ವಾಸ್ತಲ್ಯ ಇತ್ತು ಎಂದರೆ ಸರಿಯಲ್ಲ . ಆದ್ದರಿಂದ ದಿಃ 05-04-1995 ರ ವೀಲುನಾಮೆಯನ್ನು ಮಾಡಿದ್ದಾರೆ ಎಂದರೆ ಸರಿಯಲ್ಲ . ನನ್ನ ಪ್ರಕಾರ ಸದರಿ ಆಸ್ತಿಗಳಲ್ಲಿ ನಮ್ಮ ಹಕ್ಕು ಒಳಗೊಂಡಿರುವ ಕಾರಣ ವೀಲುನಾಮೆ ಸರಿ ಇರುವುದಿಲ್ಲ. ನ್ಯಾಯಲಯದ ಕಲಾಪಗಳಲ್ಲಿ ನಾನು ಆಸಕ್ತಿದಾರ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ ಮತ್ತು ಆಕೆಯ ಗಂಡನ ಮೇಲೆ ಇರುವ ವೈಶಮ್ಯದಿಂದ ವಾದಿ ಮೂಲಕ ಈ ದಾವೆ ಹೂಡಿಸಿದ್ದೇನೆ ಎಂದರೆ ಸರಿಯಲ್ಲ .

ವಾದಿಯ ಗಂಡ ಬ್ಯಾಂಕ್ ನೌಕರ ಎಂದರೆ ಸರಿ. 2 ಮತ್ತು 3 ನೇ ಪ್ರತಿವಾದಿಗಳು ದೇವಳಕುಂದ ಗ್ರಾಮದ ವಾಸಿಗಳು . 4 ನೇ ಪ್ರತಿವಾದಿಗೆ ಮೋಸ ಮಾಡುವ ದುರುದ್ದೇಶದಿಂದ ವಾದಿಯೊಂದಿಗೆ ನಾವು ಶಾಮೀಳಾಗಿ ಈ ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ . ದಿಃ 05-04-1995 ರ ವೀಲುನಾಮೆ ನ್ಯಾಯಯುತವಾದ ಕಾರಣ ಅದನ್ನು ಪ್ರಶ್ನಿಸುವ ಹಕ್ಕು ಮತ್ತು ಅಧಿಕಾರ ಇಲ್ಲ ಎಂದರೆ ಸರಿಯಲ್ಲ . 4 ನೇ ಪ್ರತಿವಾದಿಯ ಮೇಲಿನ ದ್ವೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

**ಮರುವಿಚಾರಣೆ ಇಲ್ಲ.**

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕುಂದಾಪುರ .**